## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ: ಬೆಂಗಳೂರು

ಸಂಚಾರ (ವಾಣಿಜ್ಯ) ಇಲಾಖೆ

ಸಂ:ಕರಾಸಾ:ಕೇಕ:ಸಂ:ವಾ-1:103:2018-19 ದಿನಾಂಕ: 06.04.2018

### ಸುತ್ತೋಲೆ

**ವಿಷಯ** : ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ-2018ರ ಜಾಗೃತಿ ಕಾರ್ಯಕ್ರಮಗಳ ಕುರಿತು.

**ಉಲ್ಲೇಖ:** NO.TC/ENF-3/PR-335/2017-18 Dated 03.04.2018.

------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿಂತೆ, ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ-2018ರ ಜಾಗೃತಿ ಕಾರ್ಯಕ್ರಮಗಳಾದ ಮತದಾರರುಗಳಲ್ಲಿ ಮತದಾನ ಚಲಾವಣೆಯ ಮಹತ್ವ ಹಾಗೂ ನೈತಿಕ ಮತದಾನದ ಅರಿವು ಇತ್ಯಾಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ಮಾಹಿತಿಯುಳ್ಳ ಸ್ಟಿಕರ್, ಕರಪತ್ರ, ಬ್ಯಾನರ್, ಇತ್ಯಾದಿಗಳನ್ನು ವಿತರಿಸುವುದಾಗಿ, ಅವುಗಳನ್ನು ನಿಗಮದ ಬಸ್ ನಿಲ್ದಾಣ ಮತ್ತು ಬಸ್ಸುಗಳ ಮೇಲೆ ಅಳವಡಿಸುವಂತೆ ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಕರ್ನಾಟಕ ಸರ್ಕಾರ ರವರು ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತಾರೆ.

ನಿಗಮವು ಸಾರ್ವಜನಿಕ ಉಪಯುಕ್ತ ಸೇವಾ ಸಂಸ್ಥೆಯೆಂದು ಗುರುತಿಸಿಕೊಂಡಿದ್ದು, ಮತದಾನದ ಮಹತ್ವ ಮತ್ತು ನೈತಿಕ ಮತದಾನದ ಜಾಗೃತಿಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಕ್ರಮ ವಹಿಸಲು ತಿಳಿಸಲಾಗಿದೆ.

1. ಸಾರಿಗೆ ಆಯುಕ್ತರ ಕಛೇರಿಯಿಂದ ಮತ್ತು ಜಿಲ್ಲಾಡಳಿತದಿಂದ ಸ್ಟಿಕರ್, ಕರಪತ್ರ, ಬ್ಯಾನರ್, ಇತ್ಯಾದಿಗಳನ್ನು ವಿಭಾಗೀಯ ಕಛೇರಿಗೆ ನೀಡಿದಲ್ಲಿ, (ಅ) ಕರಪತ್ರಗಳನ್ನು ಪ್ರಯಾಣಿಕರಿಗೆ ವಿತರಿಸುವುದು, (ಆ) ಬ್ಯಾನರ್‌ಗಳನ್ನು ಬಸ್ ನಿಲ್ದಾಣಗಳಲ್ಲಿ ಪ್ರದರ್ಶಿಸುವುದು ಮತ್ತು (ಇ) ಸ್ಟಿಕರ್‌ಗಳನ್ನು ಬಸ್ಸುಗಳ ಹಿಂಭಾಗದಲ್ಲಿ ಅಳವಡಿಸಲು ಕ್ರಮ ಕೈಗೊಳ್ಳುವುದು (ಪ್ರತಿಷ್ಠಿತ ಮತ್ತು ಜಾಹೀರಾತು ಪ್ರದರ್ಶನವಿರುವ ಬಸ್ಸುಗಳನ್ನು ಹೊರತುಪಡಿಸಿ). ಚುನಾವಣೆ ಮುಗಿದ ನಂತರ ಇವುಗಳನ್ನು ತೆರವುಗೊಳಿಸುವುದು.
2. EVM ಪ್ರಾತ್ಯಕ್ಷಿಕೆಗಾಗಿ, ನಿಗಮದ ಬಸ್ ನಿಲ್ದಾಣಗಳಲ್ಲಿ ಸ್ಥಳವನ್ನು ಒದಗಿಸುವುದು.
3. ನಿಗಮದ ಬಸ್ ನಿಲ್ದಾಣ / ಬಸ್ಸುಗಳಲ್ಲಿ, ಪ್ರಯಾಣಿಕರು / ರಾಜಕೀಯ ಪಕ್ಷ ಪ್ರಚಾರಕರು ಅನಧಿಕೃತ ನಗದು ಹೊಂದಿರುವ ಬಗ್ಗೆ ಪರಿಶೀಲಿಸಲು / ವಿಚಾರಣೆಗಾಗಿ, ಚುನಾವಣಾ ಆಯೋಗದ ಅಧಿಕೃತ ಅಧಿಕಾರಿಗಳಿಗೆ ಅವಕಾಶ ನೀಡುವುದು.

ಮೇಲ್ಕಂಡಂತೆ ಕ್ರಮ ವಹಿಸುವಾಗ ನಿಗಮದ ವಾಹನಗಳ ಮತ್ತು ಸಾರ್ವಜನಿಕ ಪ್ರಯಾಣಿಕರ ಓಡಾಟಕ್ಕೆ ಯಾವುದೇ ಅಡಚಣೆಯಾಗದಂತೆ ಎಚ್ಚರಿಕೆ ವಹಿಸಲು ಸೂಚಿಸಲಾಗಿದೆ.

**ನಿರ್ದೇಶಕರು (ಸಿಬ್ಬಂದಿ ಮತ್ತು ಪರಿಸರ)**

**ಪ್ರತಿಯನ್ನು:**

1) ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2) ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ರಾ.ರ.ಸಾ.ನಿಗಮ, ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3) ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು, ಕ.ರಾ.ರ.ಸಾ.ನಿಗಮರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
5) ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಭ ಮತ್ತು ಜಾ) / ನಿರ್ದೇಶಕರು (ಸಿ ಮತ್ತು ಪ) ರವರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.